International Journal of Kannada Research 2017; 3(2): 92-95




International Journal of Kannada Research
www.kannadajournal.com

**ISSN: 2454–5813**
IJSR 2017; 3(2): 92-95
© 2017 IJKS
www.kannadajournal.com
Received: 19-02-2017
Accepted: 20-03-2017

**ವಿವೇಕಾನಂದ ಸಜ್ಜನ್**
ಸಂಶೋಧನಾ ವಿದ್ಯಾರ್ಥಿ,
ಕನ್ನಡ ವಿಭಾಗ, ಕರ್ನಾಟಕ
ಕೇಂದ್ರೀಯ ವಿಶ್ವವಿದ್ಯಾಲಯ,
ಕಡಗಂಚಿ, ಕಲಬುರಗಿ.

**Correspondence**
**ವಿವೇಕಾನಂದ ಸಜ್ಜನ್**
ಸಂಶೋಧನಾ ವಿದ್ಯಾರ್ಥಿ,
ಕನ್ನಡ ವಿಭಾಗ, ಕರ್ನಾಟಕ
ಕೇಂದ್ರೀಯ ವಿಶ್ವವಿದ್ಯಾಲಯ,
ಕಡಗಂಚಿ, ಕಲಬುರಗಿ.

# ರಾಮಚಂದ್ರ ಚರಿತ ಪುರಾಣದ ಮೇಲೆ ಅನೇಕಾಂತವಾದದ ಪ್ರಭಾವ

**ವಿವೇಕಾನಂದ ಸಜ್ಜನ್**

12 ನೇ ಶತಮಾನದ ಆರಂಭ ಕಾಲದಲ್ಲಿ ಜೀವಿಸಿದ "ಅಭಿನವ ಪಂಪ" ಎಂಬ ಬಿರುದಿಗೆ ಪಾತ್ರನಾಗಿರುವ ನಾಗಚಂದ್ರ ಕವಿಯ "ರಾಮಚಂದ್ರ ಚರಿತ ಪುರಾಣ" ಕೃತಿಯು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದೆ. ಇದಕ್ಕೆ ಕಾರಣಗಳು ಇಲ್ಲದಿಲ್ಲ. ಕನ್ನಡ ರಾಮಾಯಣ ಪರಂಪರೆಯಲ್ಲಿ ಉಪಲಬ್ಧ ಕೃತಿಗಳಲ್ಲಿ ನಾಗಚಂದ್ರನ "ಪಂಪ ರಾಮಾಯಣ"ವೇ ಆದ್ಯ ಕೃತಿಯೆಂದು ಪರಿಗಣಿಸಲ್ಪಟ್ಟಿದೆ.

"ಕವಿ ಕಾಲದ ಪ್ರತಿರೂಪ" ಎಂಬ ಮಾತಿನಂತೆ ಪ್ರತಿಯೊಬ್ಬ ಕವಿಯೂ ತನ್ನ ಕಾಲದ ಧರ್ಮ, ಸಂಸ್ಕೃತಿ, ಪರಿಸರ, ದರ್ಶನ ಇತ್ಯಾದಿ ವಿಚಾರಗಳಿಂದ ಪ್ರಭಾವಿತನಾಗದೇ ಇರಲಾರ. ಇದಕ್ಕೆ ಪಂಪ ರಾಮಾಯಣದ ಕರ್ತೃ ನಾಗಚಂದ್ರನೂ ಹೊರತಲ್ಲ.

ನಾಗಚಂದ್ರನು ಒಬ್ಬ ಜೈನ ಕವಿಯಾಗಿದ್ದು, ಪಂಪರಾಮಾಯಣದಲ್ಲಿನ ಆತನ ಪಾತ್ರ ರಚನಾ ಕೌಶಲದಲ್ಲಿ ಜೈನ ದರ್ಶನದ ಮಹತ್ವದ ತತ್ವವಾದ "ಅನೇಕಾಂತವಾದ"ದ ನಿಚ್ಚಳ ಪ್ರಭಾವವನ್ನು ಕಾಣಬಹುದಾಗಿದೆ. ಜೀವನ ಜಗತ್ತು ಇತ್ಯಾದಿಗಳಿಗೆ ಸಂಬಂಧಿಸಿದಂತೆ "ಸ್ಯಾದ್ವಾದ ದೃಷ್ಟಿ" (ಅನೇಕಾಂತವಾದ) ಎಂಬ ವಿಶಿಷ್ಟವಾದ ನ್ಯಾಯ ಪದ್ದತಿಯನ್ನು ಜೈನ ಧರ್ಮವು ಬೋಧಿಸುತ್ತದೆ. ಸ್ಯಾದ್ವಾದ ಎಂದರೆ ಪ್ರತಿಯೊಂದು ತೀರ್ಮಾನವೂ ಕೂಡಾ ಸಾಪೇಕ್ಷವಾದುದು ಎಂಬ ತತ್ವ. ಅಂದರೆ ಒಂದು ವಸ್ತು ಸಂಗತಿ ಸನ್ನಿವೇಶಗಳನ್ನು ಕುರಿತಾಗಿ ನಾವು ಹೇಳುವ ತೀರ್ಪು ಆ ಸಂದರ್ಭದಲ್ಲಿ ಆ ದೃಷ್ಟಿಯಿಂದ ಮಾತ್ರ ನಿಜವಾಗುತ್ತದೆ. ಈ ವಾದವನ್ನೆ "ಸ್ಯಾದ್ವಾದ" ಎನ್ನುತ್ತಾರೆ[1].

ಯಾವುದೇ ಒಂದು ವಸ್ತುವನ್ನು, ವ್ಯಕ್ತಿಯನ್ನು ಸಕಾರಾತ್ಮಕ–ನಕಾರಾತ್ಮಕ, ದೋಷ–ಅದೋಷ, ಸರಿ–ತಪ್ಪು ಹೀಗೆ ವಿರುದ್ಧ ಕೋನಗಳಲ್ಲಿ ಗ್ರಹಿಸುವ ಪದ್ಧತಿಯನ್ನು ಸ್ಪಷ್ಟವಾಗಿ ನಿರಾಕರಿಸುವ ದೃಷ್ಟಿಕೋನವೇ "ಅನೇಕಾಂತವಾದ".

"ಅನೇಕಾಂತಂ ಜಗತ್ಸರ್ವಂ ಹೇರಂಬ ನರಸಿಂಹವತ್" ಎಂಬ ಉಕ್ತಿಯಂತೆ ಜಗತ್ತಿನ ಸಕಲ ವಸ್ತುಗಳಿಗೂ ಮಿಶ್ರ ಸ್ವಭಾವವಿದೆ. ಆನೆ ಮೊಗದ ಗಣಪತಿಯಂತೆ, ನರಸಿಂಹನಂತೆ ಸಮ್ಮಿಶ್ರವಾಗಿರುವುದೇ ಲೋಕ ಸ್ವಭಾವ. ಆನೆಯೊಳಗಣ ಏಕತೆ, ಬದಲಾವಣೆಯಾಗುತ್ತಿರುವ ಸ್ಥಿರತೆ ಎಂದೂ ಅನೇಕಾಂತವಾದವನ್ನು ವರ್ಣಿಸಬಹುದು. ಉದಾಹರಣೆಗೆ ಬೀಜ, ಅಂಕುರ, ಗಿಡ, ಮರ, ಕಟ್ಟಿಗೆ ಎಂಬ ಸ್ಥಿತಿಗಳಿದ್ದರೂ ಅದೇ ಮರ ಎನ್ನುತ್ತೇವೆ. ಇದೊಂದು ಮೇಜು ಎಂಬುದು ಸತ್ಯ. ಇದು ಮರದ ತುಂಡು, ಇದು ಅಣುಗಳ ರಾಶಿ, ಇದು ಏನೋ ಒಂದು ಎಂಬವೂ ಸತ್ಯಗಳೇ. "ಇದೆ" "ಇಲ್ಲ" ಎಂಬ ಖಚಿತಗಳ ಮಧ್ಯೆ "ಬಹುದು" ಇರಬಹುದು. ಎಲ್ಲವೂ ಸಾಪೇಕ್ಷ. ಹಠ ಕೂಡದು ಇದರಿಂದ ವಾದದಲ್ಲಿ ಅಹಿಂಸಾತತ್ವವೂ ಉಳಿಯುತ್ತದೆ. ಇದೇ ಸ್ಯಾದ್ವಾದ[1].

ಸ್ಯಾದ್ವಾದ ಎಂಬ ಸಮಾಸ ಶಬ್ದದಲ್ಲಿನ ಪೂರ್ವಪದವಾದ ಸ್ಯಾತ್ ಎಂಬುದಕ್ಕೆ ಕಥಂಚಿತ್ ಎಂದು ಅರ್ಥ. ಹಾಗೆಂದರೆ ಒಂದು ದೃಷ್ಟಿಯಿಂದ, ಒಂದು ರೀತಿಯಿಂದ ಎಂದು. ಇದು ಒಂದು ದೃಷ್ಟಿಕೋನ ಮಾತ್ರ. ಇನ್ನೊಂದು ದೃಷ್ಟಿಕೋನವೂ ಇದಕ್ಕೆ ಉಂಟು ಎಂಬುದು ಧ್ವನಿ. ಇಂಗ್ಲೀಷಿನಲ್ಲಿ ಇದನ್ನೇ "ಚಿ ಠಿಔಟಿಣ ಠಜಿ ತುಜಿತಿ, ಜಿಡಿಠಿಟ ಚಿಟಿ ಚಿಟಿರಟಜ" ಎಂದು ಹೇಳಬಹುದು[2]

ಇಂತಹ ಜೈನ ದೃಷ್ಟಿಯೇ ಪಂಪರಾಮಾಯಣದ ಪಾತ್ರಗಳ ಉದಾತ್ತೀಕರಣಕ್ಕೆ ನಾಗಚಂದ್ರನನ್ನು ಪ್ರೇರೇಪಿಸುತ್ತದೆ. ಪ್ರಾತಿನಿಧಿಕವಾಗಿ ರಾವಣನ ಪಾತ್ರವನ್ನು ಆಧರಿಸಿ ಇದನ್ನು ವಿಶ್ಲೇಷಿಸಲು ಈ ಲೇಖನದಲ್ಲಿ ಪ್ರಯತ್ನಿಸಲಾಗುವುದು.

ನಾಗಚಂದ್ರನು ರಾವಣನ ಪಾತ್ರವನ್ನು ವಿಭಿನ್ನವಾಗಿ ಚಿತ್ರಿಸುವಲ್ಲಿ ಜೈನ ಧರ್ಮದ "ಅನೇಕಾಂತವಾದ" ಸಿದ್ಧಾಂತ ನಿಸ್ಸಂಶಯವಾಗಿ ಕಾರ್ಯ ಮಾಡಿದೆ. ಇದು ರಾವಣನಲ್ಲಿರುವ ದೌರ್ಬಲ್ಯಗಳ ಮಧ್ಯೆಯೂ ಆತನ ಆತನ ಉದಾತ್ತತೆಯನ್ನು ವರ್ಣಿಸಲು ಕವಿಯನ್ನು ಪ್ರೇರೇಪಿಸಿದೆ.

ರಾವಣನ ವ್ಯಕ್ತಿತ್ವದ ಒಂದೇ ಮಗ್ಗುಲನ್ನು ನೋಡದೆ ನಕಾರಾತ್ಮಾಕತೆಯ ಮಧ್ಯೆಯೂ ಸಕಾರಾತ್ಮಕತೆಯನ್ನು ಹುಡುಕುವ ಪ್ರಯತ್ನವನ್ನು ನಾಗಚಂದ್ರ ಮಾಡಿದ್ದಾನೆ ಎನ್ನಲಡ್ಡಿಯಿಲ್ಲ. ನಾಗಚಂದ್ರನ ಪಂಪರಾಮಾಯಣದ ರಾವಣ ವಾಲ್ಮೀಕಿಯ ರಾವಣನಂತೆ ದುಷ್ಟನಲ್ಲ. ಅಸಮಬಲ ಪರಾಕ್ರಮನು, ನೀತಿವಿದನು, ರೂಪವಂತನು, ಶಿಷ್ಟರಕ್ಷಕನು ಹಾಗೂ ಮಹಾನ್ ಮಾನವತಾವಾದಿಯೂ ಆಗಿ ಕಂಡುಬರುತ್ತಾನೆ.

"ರಾಮಚಂದ್ರ ಚರಿತ ಪುರಾಣ"ದಲ್ಲಿ "ಸೀತಾಪಹರಣ' ಪ್ರಸಂಗವನ್ನು ನಾಗಚಂದ್ರ ಮೂಲಕ್ಕಿಂತ ಭಿನ್ನವಾಗಿ ಇಲ್ಲಿ ಉದ್ದೇಶ ಪೂರ್ವಕವಾಗಿ ಸೀತೆಯನ್ನು ಅಪಹರಿಸಲು ಬಂದಿರುವುದಿಲ್ಲ. ಆತನ ತಂಗಿ ಚಂದ್ರನಖಿಯ ಮಗ ಶಂಭೂಕ ಹದಿನಾಲ್ಕು ವರ್ಷಗಳ ನಿರಂತರ ತಪಸ್ಸಿನಿಂದ "ಸೂರ್ಯಹಾಸಾಸಿ'ಯನ್ನು ಪಡೆಯಲು ಯಶಸ್ವಿಯಾಗಿದ್ದನಾದರೂ ಆಕಸ್ಮಿಕವಾಗಿ ಆ ಕತ್ತಿಯ ಮೂಲಕವೇ ಲಕ್ಷ್ಮಣನಿಂದ ಕೊಲ್ಲಲ್ಪಟ್ಟನು. ಈ ವಿಷಯವನ್ನು ಚಂದ್ರನಖಿಯಿಂದ ತಿಳಿದು ಸೇಡು ತೀರಿಸಿಕೊಳ್ಳಲು ದಂಡಕಾರಣ್ಯಕ್ಕೆ ಬಂದಿದ್ದನು.

ರಾವಣನು ಬಂದಿದ್ದೇ ಬೇರೆ ಉದ್ದೇಶದಿಂದ ಆದರೆ ಮನ್ಮಥನ ಕೈವಾಡದಿಂದ ಅಲ್ಲಿ ಆಗಿದ್ದೆ ಬೇರೆ ಎನ್ನುತ್ತಾನೆ ನಾಗಚಂದ್ರ,

ಬಲೆ ದೃಷ್ಟಿಗೆ ವಜ್ರದ ಸಂ
ಕಲೆ ಹೃದಯಕ್ಕೆನಿಪ ರೂಪವತಿ ಜಾನಕಿ ಕ
ಣ್ಬೊಲದೊಳಿರೆ ಪದ್ಮಪತ್ರದ
ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ[3]

ರೂಪವತಿಯಾಗಿದ್ದ ಸೀತೆಯನ್ನು ಕಾಣುತ್ತಲೇ ರಾವಣನ ಚಿತ್ತ ಚಂಚಲಗೊಳ್ಳುತ್ತದೆ.

ವಾಮಃ ಕಾಮೋ ಮನುಷ್ಯಾಣಾಮ ಯಸ್ಮಿನ್ ಕಿಲ ನಿಬಧ್ಯತೆ
ನೇ ತಸ್ಮಿನ ಸ್ತ್ವನುಕ್ರೋಶಃ ಸ್ನೇಹಶ್ಚ ಕಿಲಜಾಯತೆ॥

(ವಾಲ್ಮೀಕಿ ರಾಮಾಯಣ ಸುಂದರ ಕಾಂಡ ಸರ್ಗ 22 ಶ್ಲೋಕ 42)[4]

ಮನುಷ್ಯರಿಗೆ ಕಾಮವೆಂಬುದು ಬಹಳ ವಕ್ರವಾದುದು. ಆ ಕಾಮವು ಯಾರಲ್ಲಿ ಪ್ರವರ್ತಿಸುವುದೋ ಆ ಜನ್ಮದಲ್ಲಿ ದಯೆಯೂ ಸ್ನೇಹವೂ ಹುಟ್ಟಿಬಿಡುವುದು.ರಾವಣನಲ್ಲಿ ಪ್ರವರ್ತಿಸಿದ್ದು ಅಂತಹ ಕಾಮವೇ ಹೀಗಾಗಿ ಆತನು ಸೀತೆಯು ಮೇಲೆ ಮೋಹ ಗೊಂಡನು.

ಆಳದಲ್ಲಿ ದೃಢ ಚಿತ್ತನಾದ ರಾವಣ ಸೀತೆ ಅನ್ಯ ಸ್ತ್ರೀ ಎಂಬುದನ್ನು ಒಂದು ಕ್ಷಣ ಗಣನೆಗೆ ತೆಗೆದುಕೊಳ್ಳದೇ ಹೋದದ್ದು ಆತನ ಮುಂದಿನ ವಿನಾಶಕ್ಕೆ ದಾರಿಯಾಯಿತು.

"ಪಲರುಂ ವಿದ್ಯಾಧರ ಸ್ತ್ರೀಯರುಂ ಅಮರಿಯರುಂ
ಮಾನವ ಸ್ತ್ರೀಯರುಂ ತಮ್ಮೊಲವಿಂ ಮೇಲ್ವಾಯ್ದೊಡಂ
ಮುಂ ಬಗೆಯದ"[5]

ಎಂಬ ಮಾತಿನಿಂದ ರಾವಣನು ಸ್ತ್ರೀಲೋಲನಾಗಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಹಲವು ವಿದ್ಯಾಧರ ಸ್ತ್ರೀಯರು ಮಾನವ ಸ್ತ್ರೀಯರು ರಾವಣನ ರೂಪಕ್ಕೆ ಮೆಚ್ಚಿ ಆತನಲ್ಲಿ ಬಂದರೂ ಚಿತ್ತ ವಿಚಿತ್ತವಾಗಿಸಿಕೊಳ್ಳದ ಆತ್ಮ ಸಂಪದವುಳ್ಳ ವ್ಯಕ್ತಿಯಾಗಿದ್ದನು.

ವಿಹಿತಾಚಾರಮನನ್ವಯಾಗತ ಗುಣ ಪ್ರಖ್ಯಾತಿಯಂ ದುಷ್ಟನಿ
ಗ್ರಹ ಶಿಷ್ಟ ಪ್ರತಿಪಾಲನಾ ಕ್ಷಮತೆಯಂ
ಕಯ್ಗಾಗಿಯದನ್ಯಾಂಗನಾ
ಸ್ಪೃಹೆಯಂ ತಾಳ್ದಿದನಲ್ತೆ ಕಾಲವಶದಿಂ ಲಂಕೇಶ್ವರಂ
ವಿಸ್ಮಯಾ
ವಹಮಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ
ದಾಂಟದೆ?[6]

ವಂಶ ಪಾರಂಪರ್ಯದಿಂದ ಉತ್ತಮ ಆಚಾರ ವಿಚಾರಗಳನ್ನು ಸದ್ಗುಣ ಸಂಪನ್ನತೆಯನ್ನು ಕಾಪಾಡಿಕೊಂಡ ದುಷ್ಟನಿಗ್ರಹ ಶಿಷ್ಟ ಪರಿಪಾಲಕನು ಆದ ರಾವಣನು ವಿಧಿಯ ಕಾರಣದಿಂದ ಪರಸ್ತ್ರೀಯಲ್ಲಿ ಮೋಹವನ್ನು ತಾಳಿದನು. ಅದಕ್ಕೇ ಸಮುದ್ರವೂ ಕಾಲವಶದಿಂದ ತನ್ನ ಮೇರೆಯನ್ನು ದಾಟದೆ? ಎಂದು ಉದ್ಘಾರವೆತ್ತಿದ್ದಾನೆ ನಾಗಚಂದ್ರ. ಮೊದಲಿನಿಂದಲೂ ಸದಾಚಾರ ಸದ್ಗುಣಗಳನ್ನು ಮೈಗೂಡಿಸಿಕೊಂಡು ಬಂದಿದ್ದ ರಾವಣ ಯಾವುದೋ ಒಂದು ದುರ್ಬಲ ಕ್ಷಣದಲ್ಲಿ ಚಂಚಲ ಚಿತ್ತನಾಗಿ ಸೀತೆಯ ಮೇಲೆ ಮೋಹಗೊಂಡನು ಎಂದಿದ್ದಾನೆ.

ಅಸಂಖ್ಯಾತ ಜೀವಜಂತುಗಳಿಗೆ ಆಶ್ರಯ ತಾಣವಾಗಿರುವ ಸಮುದ್ರಕ್ಕೆ ರಾವಣನ ವ್ಯಕ್ತಿತ್ವವನ್ನು ಹೋಲಿಸಿದ್ದು ಅತ್ಯಂತ ವಿಶಿಷ್ಟವಾಗಿದೆ.

ಅನೇಕ ಸ್ತ್ರೀಯರ ಒತ್ತಾಯದ ಮೋಹಕ್ಕೂ ಚಂಚಲ ಚಿತ್ತನಾಗದ ರಾವಣನು ಸೀತೆಯಲ್ಲಿ ಮೋಹಗೊಂಡದ್ದು ಮನ್ಮಥನ ಬಾಣಗಳಿಂದ ಎಂದಿದ್ದಾನೆ ನಾಗಚಂದ್ರ.

ಸೀತೆಯನ್ನು ಅಪಹರಿಸುವ ನಿರ್ಣಯ ಕೈಗೊಂಡ ರಾವಣ ಅಸಮಬಲನು, ಪರಾಕ್ರಮಿಯು ಆಗಿದ್ದರೂ ಸಹ ರಾಮನನ್ನು ಎದುರಿಸುವ ನಿರ್ಣಯ ಕೈಗೊಳ್ಳದೇ ಅವಲೋಕಿನಿ ವಿದ್ಯೆಯನ್ನು ನೆನೆಪಿಸಿಕೊಂಡದ್ದು ಅದರ ಸಹಾಯದಿಂದ ಸೀತೆಯನ್ನು ಅಪಹರಿಸಲು ಯೋಚಿಸಿದ್ದು ಆತನ ಘನತೆಗೆ ತಕ್ಕುದಲ್ಲ ಎಂಬ ಅಭಿಪ್ರಾಯವನ್ನು ಓದುಗರಲ್ಲಿ ಮೂಡಿಸುವುದು ಸಹಜ. ಅದಕ್ಕೆ ನಾಗಚಂದ್ರ "ಅವಲೋಕಿನಿಯಂಸ್ಮರಿಸಿದನಾತ್ಮ ಸತ್ವಗುಣಹಾನಿಯೆ ಸೂಚಿಸದೇ ವಿನಾಶಮಂ"[7] ಎಂದಿದ್ದಾನೆ.

"ಅನೇಕಾಂತವಾದ" ದೃಷ್ಟಿಯ ಪ್ರಭಾವದಿಂದ ನಾಗಚಂದ್ರ ಏಕಮುಖವಾಗಿ ರಾವಣನ ಗುಣಗಳನ್ನು ಮಾತ್ರ ಚಿತ್ರಿಸದೆ, ದೋಷಗಳನ್ನು ತೋರಿಸಿಕೊಡುತ್ತಲೇ ಆತನಲ್ಲಿರುವ ಸದ್ಗುಣಗಳನ್ನು ಹುಡುಕಲು ಪ್ರಯತ್ನಿಸಿದ್ದಾನೆ. ಹೀಗೆ ನಾಗಚಂದ್ರ ರಾವಣನ ವ್ಯಕ್ತಿತ್ವದ ವಿವಿಧ ಮಗ್ಗಲುಗಳನ್ನು ತೋರಿಸಿಕೊಟ್ಟಿದ್ದಾನೆಂಬುದರಲ್ಲಿ ಎರಡು ಮಾತಿಲ್ಲ.

ಪಂಪ ರಾಮಾಯಣವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ರಾವಣನು ಧರ್ಮ ಪರಿಪಾಲಕನು, ಪ್ರಜಾಹಿತ ಚಿಂತಕನೂ ಆಗಿದ್ದನೆಂಬುದು ತಿಳಿದು ಬರುತ್ತದೆ. ಈ ವಿಚಾರ ರಾವಣನು ಸಾಧಿಸಿಕೊಂಡ ಅವಲೋಕಿನಿ ವಿದ್ಯೆಗೂ ತಿಳಿದಿತ್ತು. ಅದಕ್ಕೆ ಕಾರಣ ಪುರುಷರಾದ ರಾಮ ಲಕ್ಷ್ಮಣರೊಂದಿಗೆ ವೈರ ಕಟ್ಟಿಕೊಳ್ಳದೇ ಇರುವ ಸಲಹೆಯನ್ನು ನೀಡುತ್ತದೆ ವಿದ್ಯೆ. ಅವಲೋಕಿನಿ ವಿದ್ಯೆಯ ಮಾತುಗಳಲ್ಲಿಯೇ ರಾವಣನ ವ್ಯಕ್ತಿತ್ವದ ಔನ್ನತ್ಯ ನಮಗೆ ಕಾಣಸಿಗುತ್ತದೆ.

ಕಾವ ಬೆಸಂ ನಿನ್ನದು ಸಕ
ಲಾವನಿಯನಧರ್ಮ ನಿರತರಂ ನಿಯಮಿಸಿ ನೀ
ನೀ ವಿಷಯಕ್ಕೆರಗುವುದುಂ
ಕಾವರೆ ಕಡೆಗೊಂಡರೆಂಬ ನುಡಿಗೆಡೆಯಕ್ಕುಂ[8]

"ಅಧರ್ಮ ನಿರತರನ್ನು ನಿಯಮಿಸುವುದರ ಮೂಲಕ ಸಕಲ ಜಗತ್ತನ್ನು ಕಾಪಾಡುವ ಕರ್ತವ್ಯ ನಿನ್ನದು. ನೀನೇ ಮೋಹಾವಿಷ್ಟನಾದರೆ ಕಾಯುವವರೇ ಕತ್ತಿ ಹಿಡಿದರು ಎಂಬ ನುಡಿಗೆ ಎಡೆಯಾಗುತ್ತದೆ ಎನ್ನುತ್ತದೆ ಅವಲೋಕಿನಿ ವಿದ್ಯೆ.

ಈ ಮೂಲಕ ರಾವಣನು ಸಮಾಜದ ರಕ್ಷಕನು ಹಿತ ಚಿಂತಕನು ಆಗಿದ್ದನೆಂಬುದು ನಮಗೆ ತಿಳಿದು ಬರುತ್ತದೆ. ಸಮಾಜದಲ್ಲಿ ಯಾವಾಗಲೂ ಸಾಮಾನ್ಯವಾಗಿ ರಕ್ಷಣೆ ಮಾಡುವ ಮತ್ತು ರಕ್ಷಣೆಗೆ ಒಳಪಡುವ ವಸ್ತುಗಳು ಇರುತ್ತವೆ. ರಕ್ಷಿತ ವಸ್ತುಗಳನ್ನು ಆಶ್ರಯ ನೀಡಿದವರು ಸರಿಯಾಗಿ ರಕ್ಷಿಸಿಕೊಂಡು ಹೋದಾಗ ಸಮಾಜ ಸರಿಯಾಗಿ ನಡೆಯುತ್ತದೆ. ಇಲ್ಲದಿದ್ದಲ್ಲಿ ಸಮಾಜದ ವ್ಯವಸ್ಥೆಯಲ್ಲಿ ಏರುಪೇರಾಗುತ್ತದೆ.

ಅದಕ್ಕಾಗಿ ಸಮಾಜದ ಹಿತರಕ್ಷಕನಾಗಿದ್ದ ರಾವಣನಿಗೆ ಅವಲೋಕಿನಿ ವಿದ್ಯೆಯಿಂದ ಬುದ್ದಿ ಹೇಳಿಸಿದ್ದಾನೆ ನಾಗಚಂದ್ರ. "ಮುನ್ನೀರ ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೆ" ಎಂದಿದ್ದಾನೆ. ನಾಗಚಂದ್ರ ಸಮುದ್ರವೆಲ್ಲ ಬಿಸಿನೀರಾದರೆ ಅದನ್ನು ತಣ್ಣಗಾಗಿಸಲು ತಣ್ಣೀರು ಎಲ್ಲಿಂದ ಸಿಗುತ್ತದೆ ಎಂದು ರಾವಣನ ವ್ಯಕ್ತಿತ್ವವನ್ನು ಬಣ್ಣಿಸಿದ್ದಾನೆ.

ಕನ್ನಡ ಸಾಹಿತ್ಯದಲ್ಲಿ ಸಮಾಜದ ರಕ್ಷಣಾ ವ್ಯವಸ್ಥೆಯನ್ನು ದೈವತ್ವದ ನೆಲೆಯಲ್ಲಿ ಕಾಣಲಾಗಿದೆ ಅಂತೆಯೆ ಇದರ ಪ್ರಸ್ತಾಪ ವಿವಿಧ ಕವಿಗಳಲ್ಲಿ ಆಗಿರುವುದನ್ನು ಗುರುತಿಸಬಹುದು ಜನ್ನನ ಯಶೋಧರ ಚರಿತೆಯಲ್ಲಿ "ಕಾವರೆ ತಾಂ ಕಣೆಗೊಳ್ವೊಡಬ್ಬೆ ಬಾರಿಪರೊಳರೆ"[9] ಎಂದು ಯಶೋಧರನ ತಾಯಿ ಚಂದ್ರಮತಿಗೆ ಹೇಳುವ ಮಾತು ಇದನ್ನು ಪುಷ್ಟೀಕರಿಸುತ್ತದೆ. ಜಿನೋಪದಿಷ್ಟವಾದ ತತ್ವಗಳಲ್ಲಿ ನಂಬಿಕೆಯುಳ್ಳವರು "ಹಿಂಸೆ"ಯನ್ನು ಮನಸ್ಸಿನಲ್ಲೂ ಕಂಡುಕೊಳ್ಳದೇ ಜೀವಿಸುವುದು ಧರ್ಮ. ಯಶೋಧರ ಹಾಗೆಯೆ ಬದುಕಿದ್ದು, ಅಂತೆಯೆ ಆತನ ತಾಯಿಯೂ. ಚಂದ್ರಮತಿಯು ಯಶೋಧರನು ಹೇಳಿದ ಕನಸಿನ ದೋಷ ಪರಿಹಾರಕ್ಕಾಗಿ ಹಿಟ್ಟಿನ ಕೋಳಿಯನ್ನು ಬಲಿಕೊಡಲು ಹೇಳಿದ್ದು ರಕ್ಷಕರು ಭಕ್ಷಕರಾದ ಸಂದರ್ಭವೇ ಎಂಬುದರಲ್ಲಿ ಎರಡು ಮಾತಿಲ್ಲ. "ಹರಕೊಲ್ಲಲ್ ಪರಕಾಯ್ವನೆ"?[10] ಎಂಬ ಪುಲಿಗೆರೆ ಸೋಮನಾಥನ ಮಾತು ಸಹ ರಕ್ಷಣಾ ವ್ಯವಸ್ಥೆಯ ಕುರಿತಾದದ್ದೇ.

> ಅಳಿಪಿ ಪರವಧುಗಧೋಗತಿ
> ಗಿಳಿವುದನಭಿನಯಿಸುವಂತೆ ಸೀತೆಯ ಸಾರ
> ಣ್ಗೆಳಿದಂ ನಭದಿಂ ಖಚರ
> ಪಳಿಗಂ ಪಾಪಕ್ಕಮಂಜದವರೇ ಗೆಯ್ಯರ್[11]

ಪರವಧುವಿಗೆ ಆಸೆಪಟ್ಟು ಅಧೋಗತಿಗೆ ಇಳಿಯುವುದನ್ನು ಅಭಿನಯಿಸುವಂತೆ ರಾವಣನು ಆಕಾಶದಿಂದ ನೆಲಕ್ಕೆ ಸೀತೆಯ ಬಳಿ ಇಳಿದನು. ಪಾಪಕ್ಕೂ ಟೀಕೆಗೂ ಅಂಜದವರು ಏನು ತಾನೆ ಮಾಡಲಾರರು? ಎಂದಿದ್ದಾನೆ ಕವಿ. ಅಧೋಗತಿಗೆ ಇಳಿಯುವಂತೆ ಇಳಿದನು ಎಂಬಲ್ಲಿ ನಾಗಚಂದ್ರ ರಾವಣನ ಮುಂದಿನ ದುರಂತದ ಸೂಚನೆ ನೀಡುತ್ತಿದ್ದಾನೆ.

> ದೋಷಿ ಪಿಡಿವಂತೆ ದಿವ್ಯದ
> ಕಾಸಿದ ಕುಳವಂ ಕಡಂಗಿ ಕಾಳೋರಗನಂ
> ಕೂಸು ಪಿಡಿವಂತೆ ಪಿಡಿದಂ
> ಸಾಸಿಗನವಿವೇಕಿ ಸೀತೆಯಂ ದಶಕಂಠಂ[12]

ದೋಷಿಯು ಕಾಸಿದ ಕುಳವನ್ನು ಹಿಡಿಯುವಂತೆ, ಮುಗ್ಧವಾದ ಕೂಸು ಸಂಭ್ರಮದಿಂದ ಕಾಳೋರಗವನ್ನು ಹಿಡಿಯುವಂತೆ, ಅವಿವೇಕಿಯು ದುಸ್ಸಾಹಸಿಯು ಆದ ರಾವಣನು ಸೀತೆಯನ್ನು ಹಿಡಿದ ಎಂದು ನಾಗಚಂದ್ರ ಹೇಳುವಲ್ಲಿ ರಾವಣನ ಸ್ವೀಕಾರಾರ್ಹವಲ್ಲದ ಕೃತ್ಯದ ಟೀಕೆ ಇದ್ದರೂ ಸಹ ಸೀತೆಯನ್ನು ಕಾಳೋರಗಕ್ಕೆ ರಾವಣನನ್ನು ಕೂಸಿಗೆ ಹೋಲಿಸಿ ಮುಂದೆ ರಾವಣನು ಮಾತೃಸ್ವರೂಪಿಯಾಗಿ ಸೀತೆಯನ್ನು ಕಾಣಲಿರುವ ಸೂಚನೆ ಕೊಡುತ್ತಾನೆ. ಇಲ್ಲಿ ಕವಿಯ ಅದ್ಭುತ ಕಲ್ಪನಾ ಶಕ್ತಿ ಓದುಗರನ್ನು ಬೆರಗುಗೊಳಿಸುತ್ತದೆ.[13]

ಜೈನಧರ್ಮದಲ್ಲಿ ಕ್ಷಮೆ ಮತ್ತು ಪಶ್ಚಾತ್ತಾಪಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ ಎಂಬುದನ್ನು ಅರಿತಿದ್ದೇವೆ. ಪಂಪರಾಮಾಯಣದ ಹಲವು ಸಂದರ್ಭದಲ್ಲಿ ರಾವಣ ಕ್ಷಮಾಮೂರ್ತಿಯಾಗಿ ಕಾಣುತ್ತಾನೆ.

ಒಮ್ಮೆ ರಾವಣ ಇಂದ್ರನ ಮೇಲೆ ದಾಳಿ ಮಾಡಲು ಉತ್ತರಾಭಿಮುಖವಾಗಿ ಕುಂಭಕರ್ಣಾದಿಗಳೊಂದಿಗೆ ಹೋಗುವಾಗ ರೈವತ ನದಿಯ ದಡದಲ್ಲಿ ಜಿನ ಪೂಜೆಗಾಗಿ ನಿಂತನು. ಸಹಸ್ರಬಾಹು ಎಂಬಾತ ಅಂತಃ ಪುರದ ವನಿತೆಯರೊಂದಿಗೆ ಜಲಕೇಳಿಯಾಡಲು ಜಂತ್ರದಿಂದ ತೊರೆಯನ್ನು ಕಟ್ಟಿ ಅನಂತರ ಬಿಚ್ಚಿದ್ದರಿಂದ ಅಕಾಲ ಪ್ರವಾಹ ಉಂಟಾಯಿತು ಇದನ್ನು ತಿಳಿದು ರಾವಣನು ಆತನನ್ನು ಬಂಧಿಸಿದ್ದನು. ಸಹಸ್ರಬಾಹುವಿನ ತಂದೆ ಶತಬಾಹುಗಳ ಕೋರಿಕೆಯಮೇರೆಗೆ ರಾವಣನು ಆತನನ್ನು ಬಂಧನದಿಂದ ಮುಕ್ತಗೊಳಿಸಿದನು.

> ಯಸ್ತು ಕ್ರೋಧಂ ಸಮುತ್ಪನ್ನಂ ಪ್ರಜ್ಞಯಾ ಪರಿಬಾಧತೆ
> ತೇಜಸ್ವಿನಂ ತಂ ವಿದುಷಂ ಮನ್ಯಂತೆ ತತ್ವದರ್ಶಿನಃ[14]

ಎಂಬ ಉಕ್ತಿಗೆ ಅನ್ವರ್ಥನೆನಿಸಿದ್ದಾನೆ ರಾವಣ. ಯಾವನು ಪ್ರಜ್ಞಾಪೂರ್ವಕವಾಗಿ ಕ್ರೋಧವನ್ನು ಹತ್ತಿಕ್ಕಬಲ್ಲನೋ ಅವನನ್ನು ತೇಜಸ್ವಿಯೆಂದು, ಪಂಡಿತನೆಂದು ತತ್ವದರ್ಶಿಗಳು ಎಣಿಸುತ್ತಾರೆ.

ಸಹಸ್ರಬಾಹುವಿನ ಕಾರಣ ಅಕಾಲ ಪ್ರವಾಹ ಉಂಟಾದುದು ಕೇಳಿ ಅಷ್ಟೇ ವೇಗವಾಗಿ ಕ್ರೋಧ ಗೊಂಡಿದ್ದ ರಾವಣ ಸಹಸ್ರಬಾಹುವಿನ ತಂದೆ ಜಂಘ ಚಾರಣರಾದ ವೀರಬಾಹುಗಳ ಕೋರಿಕೆಯನ್ನು ಅಷ್ಟೇ ಮುಕ್ತ ಮನಸ್ಸಿನಿಂದ ಗೌರವಿಸಿ ಸಹಸ್ರಬಾಹುವನ್ನು ಬಿಡುಗಡೆಗೊಳಿಸಿದ್ದು ರಾವಣನಕ್ರೋಧ ನಿಗ್ರಹ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ. "ಕ್ರೋಧಏವ ಮಹಾನ್ ಶತ್ರುಃ" ಎಂಬುದನ್ನು ಆತ ಚೆನ್ನಾಗಿಯೇ ಅರಿತವನಾಗಿದ್ದಾನೆ.

ರಾವಣನು ಎಂದಿಗೂ ಸ್ತ್ರೀಲೋಲನಾಗಿರಲಿಲ್ಲ ಎಂಬುದನ್ನು ಮೊದಲೇ ಅರಿತಿದ್ದೇವೆ. ದುರ್ಲಂಘ್ಯಪುರದ ಮೇಲಿನ ದಾಳಿಯ ಸಂದರ್ಭದಲ್ಲಿ ಇದು ಮತ್ತೊಮ್ಮೆ ಸಾಬೀತಾಗುತ್ತದೆ. ಇಂದ್ರನ ಆಯುಧಗಳ ರಕ್ಷಕನಾಗಿದ್ದ ನಳಕೂಭರ ಅರಸನ ದುರ್ಲಂಘ್ಯಪುರದ ಕೋಟೆ ಹೆಸರಿಗೆ ತಕ್ಕಂತೆ ಭೇದಿಸಲು ದುಸ್ತರವಾದ ಕೋಟೆಯಾಗಿತ್ತು.

ಆ ಕೋಟೆಯ ಮೇಲೆ ದಾಳಿ ಮಾಡಿದಾಗ ಪ್ರಚಂಡ ಪರಾಕ್ರಮಿಯಾದ ರಾವಣನೇ ನಡುಗಿ ಹೋದನು ರಾವಣನ ರೂಪ ಸಂಪನ್ನತೆಗೆ ಮನಸೋತು ಆತ ದಾಳಿ ಮಾಡಲು ಬಂದಿದ್ದನ್ನರಿತು ತನ್ನ ರಾಜ ನಳಕೂಭರನ ಹಿತವನ್ನೇ ಮರೆತು ಉಪರಂಭೆ ಕೋಟೆ ಭೇದಿಸಲು ಅಗತ್ಯವಿದ್ದ ಸಾಲಭಂಜಿನಿ ವಿದ್ಯೆಯನ್ನು ರಾವಣನಿಗೆ ಹೇಳಿಕೊಟ್ಟು ಕೋಟೆ ಭೇದಿಸಲು ಅನುವು ಮಾಡಿಕೊಟ್ಟಳು. ಇಲ್ಲಿ ಉಪರಂಭೆಯ ವರ್ತನೆಯ ಕುರಿತು "ಮದನೋನ್ಮಾದವು ಎಂಥವರನ್ನೇ ಆಗಲಿ ಮತಿಗೆಡಿಸುವುದರಲ್ಲಿ ಆಶ್ಚರ್ಯಕರವಾದದ್ದೇನಿದೆ?" ಎಂದು ಉದ್ಗಾರವೆತ್ತಿದ್ದಾನೆ ನಾಗಚಂದ್ರ. ಕಾಮಾಸಕ್ತಳಾಗಿದ್ದ ಉಪರಂಭೆಗೆ ಕೋಟೆಯನ್ನು ವಶಪಡಿಸಿಕೊಂಡ ನಂತರ ರಾವಣ ಹೇಳುವ ಮಾತುಗಳು ಆತನ ವ್ಯಕ್ತಿತ್ವದ ಔನ್ನತ್ಯವನ್ನು ಸೂಚಿಸುತ್ತವೆ. "ನೀನು ವಿಶುದ್ಧಕುಲದ ಕುಶಧ್ವಜ ಹಾಗೂ ಮಧುಕಾಂತೆಯರ" ಮಗಳು ನಿಮ್ಮ ಕುಲಾಚಾರದಂತೆ ಶೀಲ ಪರಿಪಾಲನೆ ಮಾಡುವುದು ನಿನ್ನ ಕರ್ತವ್ಯ ಅಲ್ಲದೆ ನನಗೆ ವಿದ್ಯೋಪದೇಶ ಮಾಡಿದ್ದರಿಂದ ನೀನು ಗುರು ಸಮಾನಳು ಎನ್ನುತ್ತಾನೆ ರಾವಣ.

ಅನಂತ ವೀರ್ಯ ಕೇವಲಿಗಳಿಂದ "ಪರಾಂಗನಾ ವಿರತಿ" ವ್ರತವನ್ನು ಪಡೆದಾತ ರಾವಣ. ಉಪರಂಭೆ ಸಾಲಭಂಜಿನಿ ವಿದ್ಯೆಯನ್ನು

ಹೇಳಿಕೊಟ್ಟಿದ್ದಕ್ಕಾಗಿ ಆಕೆಗೆ ಚೆನ್ನಾಗಿ ಸಂಸಾರ ಮುನ್ನಡೆಸುವಂತೆ ಸಲಹೆಯಿತ್ತದ್ದರಿಂದ ರಾವಣನು ದೃಢ ಚಿತ್ತದ ಮನೋನಿಗ್ರಹಿ ಎಂಬುದರ ಅರಿವು ನಮಗೆ ಆಗುತ್ತದೆ.

ರಾವಣನು ಸಾಹಸಿಯು, ಮಹತ್ವಾಕಾಂಕ್ಷಿಯು ಆದ ವೀರನಾಗಿದ್ದು "ಯುದ್ಧ ನೀತಿ"ಗೆ ಬದ್ಧನಾದ ವ್ಯಕ್ತಿಯಾಗಿದ್ದನು.

ರಾವಣ ಲಕ್ಷ್ಮಣರ ಯುದ್ದದ ಸಂದರ್ಭದಲ್ಲಿ ರಾವಣನ ಹೊಡೆತಕ್ಕೆ ಲಕ್ಷ್ಮಣನು ಮೂರ್ಛೆ ಹೋಗುತ್ತಾನೆ. ರಾವಣನ ಪರಾಕ್ರಮದ ಅಗಾಧತೆಯ ಅರಿವು ಅಲ್ಲಿ ನಮಗೆ ಆಗುತ್ತದೆ. ಮಹಾನ್ ಪರಾಕ್ರಮಿಯಾದ ಆತ ಯುದ್ಧ ನೀತಿಯನ್ನು ತೊರೆಯದ ನೀತಿವಿದನಾಗಿ ನಮಗೆ ಕಂಡು ಬರುತ್ತಾನೆ. "ಬಿದ್ದವನನ್ನು ಇರಿಯಬಾರದೆಂದು" ಎಂಬ ಮಾತಿನಂತೆ ಕೆಳಗೆ ಬಿದ್ದ ಲಕ್ಷ್ಮಣನ ಮೇಲೆ ಬಲಪ್ರಯೋಗ ಮಾಡದೆ ಧರ್ಮಪರ ವ್ಯಕ್ತಿಯಾಗಿ ಕಾಣುತ್ತಾನೆ. ಪಂಪ ರಾಮಾಯಣದ ಕೊನೆಯ ಭಾಗದಲ್ಲಿ ಓದುಗರಿಗೆ ರಾವಣನ ಮಾಗಿದ ವ್ಯಕ್ತಿತ್ವದ ಪರಿಚಯವಾಗುತ್ತದೆ.

ಉಚಿತ ಅನುಚಿತಗಳನ್ನರಿತು ವರ್ತಿಸುವ ವ್ಯಕ್ತಿಯೇ ನಿಜವಾದ ವಿವೇಕ ಪ್ರಜ್ಞೆಯುಳ್ಳ ವ್ಯಕ್ತಿಯಾಗಿ ಕಂಡುಬರುತ್ತಾನೆ. ರಾವಣನು ವಿವೇಕಪ್ರಜ್ಞೆ ಇಲ್ಲದೆ ಸೀತೆಯನ್ನು ಅಪಹರಿಸಿದ್ದು ಕಂಡುಬರುತ್ತದೆ. ರಾವಣನಿಗೆ ಸಾಧ್ವಿತೇಜಸ್ಸುಳ್ಳ ಸೀತೆಯ ಧೋರಣೆಯಿಂದ ತನ್ನ ತಪ್ಪಿನ ಅರಿವು ಉಂಟಾಗುತ್ತದೆ, ವಿವೇಕ ಪ್ರಜ್ಞೆ ಜಾಗೃತಗೊಳ್ಳುತ್ತದೆ. ದೃಢ ಚಿತ್ತವುಳ್ಳವನಾಗಿ ಬಹುರೂಪಿಣಿ ವಿದ್ಯೆಯನ್ನು ಸಾಧಿಸಿಕೊಂಡ ಬಳಿಕ ಮತ್ತೊಮ್ಮೆ ಸೀತೆಯ ಮನವೊಲಿಸುವ ಪ್ರಯತ್ನ ಮಾಡಿದಾಗ ಆಕೆ "ನನ್ನ ಮೇಲೆ ಕರುಣೆಯಿರುವುದಾದರೆ ದಶಕಂಠನೆ ರಘುತನೂಜನ ಆಯಸ್ಸು ಇರುವವರೆಗೂ ಈ ಕಡೆ ಸುಳಿಯಬೇಡ" ಎಂದು ಮೂರ್ಛೆ ಹೋದಳು.

"ಕದಡಿದ ಸಲಿಲಂ ತಿಳಿವಂದದೆ"[15] ಎಂಬ ಮಾತಿನಂತೆ ಬಗ್ಗಡಗೊಂಡಿದ್ದ ನೀರು ತಿಳಿಯಾದಂತೆ ರಾವಣನ ಮನಸ್ಸು ತಿಳಿಯಾಯಿತು. ಸೀತೆಯ ಬಗೆಗೆ ಅನುಕಂಪ ಉಂಟಾಯಿತು. ತಾನು ಮಾಡಿದ ಕೃತ್ಯಕ್ಕೆ ಪಶ್ಚಾತ್ತಾಪಪಟ್ಟನು. ಅದಕ್ಕಾಗಿಯೇ ಎಷ್ಟೇ ಆದರೂ ರಾವಣನು ಉದಾಚರಿತನಲ್ಲವೆ! ಎಂದು ಕವಿ ಉದ್ಗಾರವೆತ್ತಿದ್ದಾನೆ.

"ಸೀತಾಪಹರಣ"ದ ತಪ್ಪು ಮಾಡಿದ ರಾವಣನಿಗೆ ಅರಿವು ಉಂಟಾಗುವುದು ಪರಿವರ್ತನೆಯ ದ್ಯೋತಕವಾಗಿದೆ.

ತನ್ನ ತಪ್ಪನ್ನು ತಿದ್ದಿಕೊಂಡ ರಾವಣನ ಪ್ರವೃತ್ತಿಯಿಂದ ಆತ ಓದುಗರಿಗೆ ಅಪ್ಯಾಯಮಾನನಾಗುತ್ತಾನೆ

"ಹಿತವಂ ತೋರುವನಾತ್ಮ ಬಂಧು"[10] ಎಂಬ ಮಾತಿನಂತೆ ರಾವಣನ ತಮ್ಮ ವಿಭೀಷಣ ಎಂದಿಗೂ ಆತನ ಹಿತವನ್ನು ಬಯಸಿದನು ಆದರೆ ಅದಕ್ಕೆ ಕಿವಿಗೊಡದ ರಾವಣ ಆತನನ್ನು ದೂರಸರಿಸಿದವನು ಅದರ ಕುರಿತು ಆತನಲ್ಲಿಯೇ ಆತ್ಮಾವಲೋಕನದ ಪ್ರಕ್ರಿಯೆ ನಡೆಯುವುದು ರಾವಣ ಪಕ್ವಗೊಂಡಿರುವುದರ ಸಂಕೇತವಾಗಿ ಕಂಡುಬರುತ್ತದೆ.

ಈ ರೀತಿಯಾಗಿ ನಾಗಚಂದ್ರನ ಪಂಪರಾಮಾಯಣದಲ್ಲಿನ ರಾವಣನ ಪಾತ್ರದ ವಿಭಿನ್ನ ನೆಲೆಗಳನ್ನು ಜೈನ ದರ್ಶನದ ಮಹತ್ವದ ತತ್ವವಾದ ಅನೇಕಾಂತವಾದವನ್ನು ಹಿನ್ನೆಲೆಯಾಗಿರಿಸಿಕೊಂಡು ಈ ಬರವಣಿಗೆಯಲ್ಲಿ ಗುರುತಿಸಲು ಪ್ರಯತ್ನಿಸಿದ್ದೇನೆ.

ಹಲವು ದೃಷ್ಟಿಕೋನಗಳಿಗೆ ದಾರಿ ಮಾಡಿಕೊಡುವ ಅನೇಕಾಂತವಾದದ ಪ್ರಭಾವದಿಂದಾಗಿಯೇ ನಾಗಚಂದ್ರ ಏಕಮುಖವಾಗಿ ರಾವಣನ ದುಷ್ಟತನ ಇಲ್ಲವೇ ಒಳ್ಳೆಯ ಅಂಶಗಳನ್ನು ಮಾತ್ರ ಚಿತ್ರಿಸದೆ, ಆತನ ತಪ್ಪುಗಳನ್ನು ಗುರುತಿಸುತ್ತಲೇ ಆತನ ಆಂತರ್ಯದಲ್ಲಿನ ಉದಾತ್ತತೆಯನ್ನು ಗುರುತಿಸಿದ್ದಾನೆ ಎಂಬುದರಲ್ಲಿ ಎರಡು ಮಾತಿಲ್ಲ.

**ಕೊನೆ ಟಿಪ್ಪಣಿಗಳು**

1. ಕರ್ನಾಟಕದ ಸಂಸ್ಕೃತ ಜೈನ ಕವಿಗಳು, ಡಾ॥ ವಿಘ್ನರಾಜ ಎಸ್. ಆರ್., ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು 2008, ಪುಟ ಸಂಖ್ಯೆ 8.
2. ಲೇಖನ–ಅನೇಕಾಂತವಾದ: ಸಮನ್ವಯದ ಸಾರ–ಭೂಮಿಕಾ, ಸಂಪುಟ 1, ಸಪ್ನ ಪ್ರಕಾಶನ ಬೆಂಗಳೂರು 2010, ಪುಟ ಸಂಖ್ಯೆ 238.
3. ರಾಮಚಂದ್ರ ಚರಿತ ಪುರಾಣ ಸಂಗ್ರಹ, ಸಂ. ಡಾ. ದಿಬ್ಬದ ಶಾಂತಿನಾಥ ಮತ್ತು ಡಾ. ಎಸ್. ಶಿವಾನಂದ, ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, 2004, ಆಶ್ವಾಸ–4, ಪದ್ಯ 23.
4. ಉಲ್ಲೇಖ: ಜನ್ನ ಕವಿಯ ಯಶೋಧರ ಚರಿತೆ (ಗದ್ಯ) ತೆಕ್ಕುಂಜ ಗೋಪಾಲಕೃಷ್ಣ ಭಟ್ಟ., ಕನ್ನಡ ಸಾಹಿತ್ಯ ಪರಿಷತ್ತು 2013, ಪುಟ ಸಂಖ್ಯೆ 9.
5. ನಾಗಚಂದ್ರನ ರಾಮಚಂದ್ರ ಚರಿತ ಪುರಾಣ ಪ್ರವೇಶ, ಸಂ. ವೆಂಕಟರಮಣ ಐತಾಳ್ ಬಿ. ಆರ್. ಅಕ್ಷರ ಪ್ರಕಾಶನ ಹೆಗ್ಗೋಡು (ಸಾಗರ), 2009, ಅಧ್ಯಾಯ 7, ಪುಟ ಸಂಖ್ಯೆ 41.
6. ರಾಮಚಂದ್ರ ಚರಿತ ಪುರಾಣ ಸಂಗ್ರಹ, ಸಂ. ಡಾ. ದಿಬ್ಬದ ಶಾಂತಿನಾಥ ಮತ್ತು ಡಾ. ಎಸ್. ಶಿವಾನಂದ, ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, 2004, ಆಶ್ವಾಸ–4, ಪದ್ಯ 25, ಪುಟ ಸಂಖ್ಯೆ 74.
7. ಅದೇ. ಆಶ್ವಾಸ–4, ಪದ್ಯ 27, ಪುಟ ಸಂಖ್ಯೆ 75.
8. ನಾಗಚಂದ್ರನ ರಾಮಚಂದ್ರ ಚರಿತ ಪುರಾಣ ಪ್ರವೇಶ, ಸಂ. ವೆಂಕಟರಮಣ ಐತಾಳ್ ಬಿ. ಆರ್. ಅಕ್ಷರ ಪ್ರಕಾಶನ ಹೆಗ್ಗೋಡು (ಸಾಗರ), 2009, ಅಧ್ಯಾಯ 7, ಪುಟ ಸಂಖ್ಯೆ 45.
9. ಜನ್ನ ಕವಿಯ ಯಶೋಧರ ಚರಿತೆ (ಗದ್ಯ) ತೆಕ್ಕುಂಜ ಗೋಪಾಲಕೃಷ್ಣ ಭಟ್ಟ., ಕನ್ನಡ ಸಾಹಿತ್ಯ ಪರಿಷತ್ತು 2013, ಅವತಾರ 3, ಪದ್ಯ 19, ಪುಟ ಸಂಖ್ಯೆ 48.
10. ಸೋಮೇಶ್ವರ ಶತಕ, ಸಂ. ರಾಮಚಂದ್ರರಾವ ಕೆ., ಪ್ರಕಾಶಕರು ಪ್ರತಿಭಾ ಗ್ರಂಥ ಮಾಲೆ, ಧಾರವಾಡ (ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ–1) 2008, ಪದ್ಯ 4, ಪುಟ ಸಂಖ್ಯೆ 10.
11. ರಾಮಚಂದ್ರ ಚರಿತ ಪುರಾಣ ಸಂಗ್ರಹ, ಸಂ. ಡಾ. ದಿಬ್ಬದ ಶಾಂತಿನಾಥ ಮತ್ತು ಡಾ. ಎಸ್. ಶಿವಾನಂದ, ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, 2004, ಆಶ್ವಾಸ–4, ಪದ್ಯ 34, ಪುಟ ಸಂಖ್ಯೆ 76.
12. ಅದೇ, ಆಶ್ವಾಸ–4, ಪದ್ಯ 35.
13. ನಾಗಚಂದ್ರ–ಸಮೀಕ್ಷೆ, ಡಾ. ಕೃಷ್ಣಕುಮಾರ ಸಿ. ಪಿ., ಅಖಿಲಾ ಎಜೆನ್ಸೀಸ್ ಮೈಸೂರು, 2006, ಪುಟ ಸಂಖ್ಯೆ 38. ಇದರ ಸಹಾಯ ಪಡೆಯಲಾಗಿದೆ.
14. ದಿನಕ್ಕೊಂದು ಸುಭಾಷಿತ, ಸಂ. ಪ್ರೊ. ರವಿಕುಮಾರ ಕೆ. ಆರ್., ಪ್ರಕಾಶಕರು "ರಚನಾ", 685, ರಾಮಾಂಜನೇಯ ರಸ್ತೆ ಶ್ರೀನಗರ, ಬೆಂಗಳೂರು–50, 2000, ಶ್ಲೋಕ 280, ಪುಟ ಸಂಖ್ಯೆ 94.
15. ನಾಗಚಂದ್ರನ ರಾಮಚಂದ್ರ ಚರಿತ ಪುರಾಣ ಪ್ರವೇಶ, ಸಂ. ವೆಂಕಟರಮಣ ಐತಾಳ್ ಬಿ. ಆರ್. ಅಕ್ಷರ ಪ್ರಕಾಶನ ಹೆಗ್ಗೋಡು (ಸಾಗರ), 2009, ಅಧ್ಯಾಯ 13, ಪುಟ ಸಂಖ್ಯೆ 93.